# ಭತ್ತ ಬೆಳೆಯುವುದೆಂದರೆ...

**'ಭತ್ತ!** ಚಪ್ಪಲಿಗಾಲಲ್ಲಿ ಮೆಟ್ಟಬಾರದು
ದಾಟಿ ಬಾ' ಎಂದೆ.
ಅವಳಿಗೆ ಅರ್ಥವಾಗಲಿಲ್ಲ
'ಭತ್ತ!... ಹಾಗೆಂದರೇನು?'
ಪ್ರಶ್ನೆ ತೂರಿ ಬಂತು

ಅವಳಿಗೆ ಅಕ್ಕಿ ಗೊತ್ತು, ದೋಸೆ ಗೊತ್ತು,
ಅನ್ನ, ಪುಳಿಯೋಗರೆ,
ಪಲಾವ್, ಕೇಸರಿಭಾತ್, ರೊಟ್ಟಿ
ಎಲ್ಲವೂ ಗೊತ್ತು
ಗೊತ್ತಿಲ್ಲ ಭತ್ತ

ಓದಿ ತಿಳಿದವುಗಳು ನೋಡಿ
ತಿಳಿದವುಗಳಂತೆ
ಬಡಪೆಟ್ಟಿಗೆ ನೆನಪಾಗುವುದಿಲ್ಲ
ಗೊತ್ತಿರಲೇಬೇಕು ಎಂಬ ಕಟ್ಟುಪಾಡಿರದ
ಅನೇಕ ಸಂಗತಿಗಳಿವೆ ಜಗತ್ತಿನಲ್ಲಿ
ಆದರೆ ಭತ್ತ?
ತಿಳಿದಿರಬೇಕಾದ ವಿಷಯ.

ವಿಷಾದವೆನ್ನಿಸಿ
ಅಜ್ಜ ಹತ್ತಾರು ಎಕರೆ ಬಿತ್ತಿದ್ದು
ಅಜ್ಜಿ ನೂರಾರು ಖಂಡುಗ ಕುಟ್ಟಿದ್ದು
ಅಪ್ಪ ಊಳಿದ್ದು, ಅವ್ವ ನೆಟ್ಟದ್ದು
ನಾನೂ ಕಾಲೇಜು ಬಿಟ್ಟು ಬಂದ ಮೇಲೆ
ತಾಸೆರಡು ತಾಸು ಕಳೆ ಕಿತ್ತಿದ್ದು
ಎಲ್ಲ ಹೇಳಿದೆ

ಅವಳು ಆಕಳಿಸಿದಳು

ಹೇಳುವುದು ನಿಲ್ಲಿಸಿ
ಒಂದು ಭತ್ತ ಬಿಡಿಸಿದೆ
ಅಮ್ಮನ ಬಸಿರಿಂದ ಹಾಲುಗಲ್ಲದ ಕೂಸಂತೆ
ಅಕ್ಕಿ ಹೊರಬಂತು

ಅವಳು ಚಪ್ಪಾಳೆ ತಟ್ಟಿ ಕುಣಿದಳು
ತಾನೂ ಹತ್ತಾರು ಭತ್ತ ಬಿಡಿಸಿದಳು
ಬೇಯುವ ಅನ್ನಕ್ಕೆ ಹಾಕಿದಳು
ಅಂದು ಒಂದಗುಳೂ ಬಿಡದೆ ಉಣ್ಣುತ್ತ
'ನಾವೂ ಬೆಳೆಯೋಣ, ನಾವೂ
ಬೆಳೆಯೋಣ' ಎಂದಳು

